**ದಿನಾಂಕ 05-11-2022 ರಂದು ಬೆಳಗ್ಗೆ 12.30 ಗಂಟೆಗೆ ವಾರ್ಡ್-124 ರ ಕೋಡಿಹಳ್ಳಿ ಸರ್ಕಾರಿ ಶಾಲೆಯಲ್ಲಿ ನಡೆದ ವಾರ್ಡ್ ಸಮಿತಿ ಸಭೆಯ ನಡವಳಿಗಳು**

ವಾರ್ಡ್ ಸಂಖ್ಯೆ-124 ಜೀವನ್‌ಭೀಮಾನಗರದ ಕೋಡಿಹಳ್ಳಿ ಸರ್ಕಾರಿ ಶಾಲೆಯಲ್ಲಿ ದಿನಾಂಕ: 05-11-2022 ರಂದು ಬೆಳಿಗ್ಗೆ 12.30 ಗಂಟೆಗೆ ಮಾನ್ಯ ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ರವರು ನಿಯೋಜಿಸಿರುವ ವಾರ್ಡ್‌ನ ನೋಡಲ್ ಅಧಿಕಾರಿಯವರ ಅಧ್ಯಕ್ಷತೆಯಲ್ಲಿ, ವಾರ್ಡ್ ಸಮಿತಿ ಸಭೆಯನ್ನು ಕರೆಯಲಾಗಿದ್ದು, ಈ ಕೆಳಕಂಡಂತೆ ಸದಸ್ಯರು ಸಭೆಯಲ್ಲಿ ಭಾಗವಹಿಸಿರುತ್ತಾರೆ.

**ಸಭೆಗೆ ಹಾಜರಿದ್ದ ಸದಸ್ಯರು ಹಾಗೂ ಅಧಿಕಾರಿಗಳು**

1. ಶ್ರೀ.ಸಾವಿತ್ರಿ –ಅಧ್ಯಕ್ಷರು ಮತ್ತು ನೋಡಲ್ ಅಧಿಕಾರಿಗಳು, ವಾರ್ಡ್-88.
2. ಶ್ರೀಮತಿ ಶಿಲ್ಪಶ್ರೀ – ಸಹಾಯಕ ಅಭಿಯಂತರರು ಹಾಗೂ ಸದಸ್ಯ ಕಾರ್ಯದರ್ಶಿ.
3. ಶ್ರೀ.ರಾಘವೇಂದ್ರ – ಹಿರಿಯ ಆರೋಗ್ಯ ಪರಿವೀಕ್ಷಕರು
4. ಶ್ರೀ.ಹನುಮಂತಪ್ಪ – ಕಿರಿಯ ಘನತ್ಯಾಜ್ಯ ಪರಿವೀಕ್ಷಕರು
5. ಶ್ರೀ.ಸತೀಶ್ – ಎಎಸ್‌ಐ, ಜೆಬಿಎನ್ ಪೊಲೀಸ್ ಠಾಣೆ
6. ಶ್ರೀ.ಚಂದ್ರಶೇಖರ್ – ಯುಎಫ್‌ಡಬ್ಲ್ಯೂ ವತಿ ಕಂಟ್ರಾಕ್ಟರ್
7. ಶ್ರೀ.ಚಂದ್ರು – ಸದಸ್ಯರು
8. ಶ್ರೀ.ಪಾಲ್ ಅಮಲ್‌ರಾಜ್ – ಸದಸ್ಯರು

ಪ್ರಥಮವಾಗಿ ವಾರ್ಡ್ ಕಾರ್ಯದರ್ಶಿಗಳು ಹಾಗೂ ಸಂಚಾಲಕರು ಆದ ಶ್ರೀಮತಿ ಶಿಲ್ಪಶ್ರೀ ರವರು ಸಭೆಗೆ ಆಗಮಿಸಿದ್ದ ಎಲ್ಲಾ ಅಧಿಕಾರಿಗಳು, ಸದಸ್ಯರು ಮತ್ತು ಸಾರ್ವಜನಿಕರನ್ನು ಸಭೆಗೆ ಸ್ವಾಗತಿಸಿದರು. ಹಿಂದಿನ ಸಭೆಯ ನಡವಳಿಗಳನ್ನು ಓದಿ ತಿಳಿಸಿದರು. ಹಾಗೂ ಇಂದಿನ ಸಭೆಯ ಅಜೆಂಡಾ ಹಾಗೂ ಸಾರ್ವಜನಿಕರ ಕುಂದುಕೊರತೆಗಳ ಬಗ್ಗೆ ಸಭೆಗೆ ಮಾಹಿತಿ ನೀಡುವಂತೆ ಕೋರಿದರು.

- 9ನೇ ಅಡ್ಡ ರಸ್ತೆಯಲ್ಲಿ ಗುಂಡಿಗಳನ್ನು ಮುಚ್ಚಬೇಕೆಂದು ಸಭೆಯಲ್ಲಿ ಹಾಜರಿದ್ದ ವಿಜಯ್ ಎಂಬುವವರು ತಿಳಿಸಿದರು. ಇದಕ್ಕೆ ಸಭೆಯಲ್ಲಿ ಹಾಜರಿದ್ದ ಸಹಾಯಕ ಅಭಿಯಂತರರು ಮುಚ್ಚಿಸಿಕೊಡುವುದಾಗಿ ತಿಳಿಸಿದರು.

- 18ನೇ ಮುಖ್ಯ ರಸ್ತೆಯಲ್ಲಿ ಚರಂಡಿ ಹೂಳನ್ನು ಎತ್ತಿಸಿಕೊಡಬೇಕೆಂದು ಸಭೆಯಲ್ಲಿ ಹಾಜರಿದ್ದ ಚಂದ್ರು ಎಂಬುವವರು ತಿಳಿಸಿದರು. ಇದಕ್ಕೆ ಸಭೆಯಲ್ಲಿ ಹಾಜರಿದ್ದ ಸಹಾಯಕ ಅಭಿಯಂತರರು ಮುಂದಿನ ದಿನಗಳಲ್ಲಿ ಕಾಮಗಾರಿ ವತಿಯಿಂದ ಚರಂಡಿ ಹೂಳನ್ನು ತೆಗೆಸುವುದಾಗಿ ತಿಳಿಸಿದರು.

- ಕೋಡಿಹಳ್ಳಿಯಲ್ಲಿ ಹೊಸದಾಗಿ 5000 ಚದರ ಅಡಿಗೆ ಸಮುದಾಯ ಭವನವನ್ನು ನಿರ್ಮಿಸಿ ಕೊಡಬೇಕೆಂದು ಸಭೆಯಲ್ಲಿ ಹಾಜರಿದ್ದವರು ತಿಳಿಸಿದರು.

- 12ನೇ ಮುಖ್ಯ ರಸ್ತೆ ಹಾಗೂ 6ನೇ ಅಡ್ಡ ರಸ್ತೆ ಕೋಡಿಹಳ್ಳಿಯಲ್ಲಿ ರಸ್ತೆ ತುಂಬಾ ಹದಗೆಟ್ಟಿರುವುದರಿಂದ, ಸಾರ್ವಜನಿಕರು ಓಡಾಡಲು ಅನಾನುಕೂಲವಾಗಿರುತ್ತದೆ. ಹಾಗಾಗಿ ರಸ್ತೆ ದುರಸ್ತಿ ಕಾಮಗಾರಿಯನ್ನು ಮಾಡಿಸಿಕೊಡಬೇಕೆಂದು ಸಭೆಯಲ್ಲಿ ಹಾಜರಿದ್ದವರು ತಿಳಿಸಿದರು. ಇದಕ್ಕೆ ಸಭೆಯಲ್ಲಿ ಹಾಜರಿದ್ದ ಸಹಾಯಕ ಅಭಿಯಂತರರು ಮಾಡಿಸಿಕೊಡುವುದಾಗಿ ತಿಳಿಸಿದರು.

- ಪೋಲೀಸ್ ಇಲಾಖೆಯಿಂದ ಯಾವುದೇ ಸಮಸ್ಯೆಯಿರುವುದಿಲ್ಲ ಎಂದು ಸಭೆಯಲ್ಲಿ ಹಾಜರಿದ್ದ ಸಾರ್ವಜನಿಕರು ತಿಳಿಸಿದರು.
- 6ನೇ ಮುಖ್ಯ ರಸ್ತೆ ಆನಂದಪುರ ಸ್ಲಮ್‌ನಲ್ಲಿ ಚರಂಡಿಗಳಲ್ಲಿ ಹೂಳು ತುಂಬಿಕೊಂಡಿದ್ದು, ಅದನ್ನು ತೆರವುಗೊಳಿಸಬೇಕೆಂದು ತಿಳಿಸಿದರು. ಇದಕ್ಕೆ ಸಭೆಯಲ್ಲಿ ಹಾಜರಿದ್ದ ಸಹಾಯಕ ಅಭಿಯಂತರರು ತೆರವು ಮಾಡಿಸಿಕೊಡುವುದಾಗಿ ತಿಳಿಸಿದರು.
- ಓಂ ಶಕ್ತಿ ದೇವಾಲಯದ ಮುಖ್ಯ ರಸ್ತೆ ಸಿಂಕ್ ಆಗಿರುವ ಬಗ್ಗೆ ಸಾರ್ವಜನಿಕರು ದೂರು ನೀಡಿದರು. ಇದಕ್ಕೆ ಸಭೆಯಲ್ಲಿ ಹಾಜರಿದ್ದ ಸಹಾಯಕ ಅಭಿಯಂತರರು ಮುಂದಿನ ದಿನಗಳಲ್ಲಿ ಹೊಸದಾಗಿ ಕಾಂಕ್ರೀಟ್ ರಸ್ತೆ ಮಾಡಿಸಿಕೊಡುವುದಾಗಿ ತಿಳಿಸಿದರು.
- ವಾರ್ಡ್ ವ್ಯಾಪ್ತಿಯಲ್ಲಿ ಹೊಸದಾಗಿ ಉಂಟಾಗುವ ಬ್ಲಾಕ್ ಸ್ಪಾಟ್‌ಗಳನ್ನು ಆಗಿಂದ್ದಾಗ್ಗೆ ತೆರವುಗೊಳಿಸಲು ಮಾನ್ಯ ಅಧ್ಯಕ್ಷರು ಸೂಚಿಸಿದರು ಹಾಗೂ ರಸ್ತೆ ಬದಿಯಲ್ಲಿ ಕಸವನ್ನು ಹಾಕಿದರೆ ದಂಡವನ್ನು ವಿಧಿಸುವಂತೆ ಅದರೊಂದಿಗೆ NCR ದಾಖಲಿಸುವಂತೆ ಸೂಚಿಸಿದರು.
- ಕೋಡಿಹಳ್ಳಿ ಸ್ಮಶಾನದ ಹತ್ತಿರ ಮತ್ತು ಒಳಗಡೆ ಸ್ವಚ್ಛಗೊಳಿಸಿ ಸಿಸಿಕ್ಯಾಮೆರಾ ಅಳವಡಿಸಲು ಅಧ್ಯಕ್ಷರು ಸೂಚಿಸಿದರು.
- ವಾರ್ಡಿನಲ್ಲಿ ಹಲವು ಕಡೆಗಳಲ್ಲಿ ಇರುವ ಬೀದಿದೀಪಗಳ ಬಗ್ಗೆ ದೂರು ಬಂದಿದ್ದು ಬೀದಿ ದೀಪಗಳ ನಿರ್ವಹಣೆಯನ್ನು ಸರ್ಮಪಕವಾಗಿ ಮಾಡಲು ಇಲಾಖೆಯ ಅಧಿಕಾರಿಗಳಿಗೆ ತಿಳಿಸಲಾಯಿತು.

Shilpa

ಕಾರ್ಯದರ್ಶಿಗಳು

ವಾರ್ಡ್ ಸಮಿತಿ–124

ಅಧ್ಯಕ್ಷರು 9/11/22

ವಾರ್ಡ್ ಸಮಿತಿ, ವಾರ್ಡ್ 124

ಹಾಗೂ ನೋಡಲ್ ಅಧಿಕಾರಿಗಳು ವಾರ್ಡ್ 124